# ಸ್ವರ್ಗದಲ್ಲಿ ಮಹಿಳೆಯರ ಸ್ಥಿತಿ

## أحوال النساء في الجنة

[**Kannada –** ಕನ್ನಡ –كنادي ]


**ಸುಲೈಮಾನ್ ಇಬ್ನ್ ಸಾಲಿಹ್ ಅಲ್‌ಖುರಾಶೀ**

**سليمان بن صالح الخراشي**

**ಅನುವಾದ: ಮುಹಮ್ಮದ್ ಹಂಝಾ ಪುತ್ತೂರು**

**ترجمة: محمد حمزة بتوري**



**1435 – 2014**

IslamHouse.com

بِسْمِ اللهِ الرَّحْمَـنِ الرَّحِيم

ಸ್ವರ್ಗದಲ್ಲಿ ಮಹಿಳೆಯರ ಸ್ಥಿತಿ ಹೇಗಿರುತ್ತದೆ? ಅಲ್ಲಿ ಅವರಿಗೋಸ್ಕರ ಏನೆಲ್ಲ ಸಿದ್ಧಗೊಂಡಿರುತ್ತದೆ?

ಜನರಲ್ಲಿ ಹೆಚ್ಚಿನವರು (ವಿಶೇಷವಾಗಿ ಮಹಿಳೆಯರು) ಇಂತಹ ಪ್ರಶ್ನೆಗಳನ್ನು ಪುನರಾವರ್ತಿಸಿ ಕೇಳುತ್ತಾರೆ. ಆದ್ದರಿಂದ ಇವರ ಪ್ರಶ್ನೆಗಳಿಗೆ ಉತ್ತರವಾಗಿ ಕುರ್‌ಆನ್ ಮತ್ತು ಸುನ್ನತ್ತಿನಿಂದ ಹಾಗೂ ಉಲಮಾಗಳ ಮಾತುಗಳಿಂದ ನಾನು ಈ ಕೆಳಗಿನದ್ದನ್ನು ಹೇಳಲು ಇಚ್ಛೆ ಪಡುತ್ತೇನೆ.

• ಸ್ವರ್ಗದಲ್ಲಿ ತಮಗೆ ಏನೆಲ್ಲ ಪ್ರತಿಫಲಗಳು ಮತ್ತು ಅನುಗ್ರಹಗಳು ಸಿಗಲಿವೆ ಎಂದು ಮಹಿಳೆಯರು ಪ್ರಶ್ನಿಸಬಾರದೆಂದು ಕೆಲವರು ಹೇಳುತ್ತಾರೆ. ಇದು ತಪ್ಪು. ಯಾಕೆಂದರೆ ಮನುಷ್ಯನು ಯಾವಾಗಲೂ ತನ್ನ ಭವಿಷ್ಯದ ಬಗ್ಗೆ ಮತ್ತು ಭಾವೀ ಜೀವನದ ಬಗ್ಗೆ ಚಿಂತಿತನಾಗಿರುತ್ತಾನೆ. ಸ್ವರ್ಗ ಜೀವನವು ಕೂಡ ಮನುಷ್ಯನ ಭಾವೀ ಜೀವನವಾಗಿದೆ.

ಮಾತ್ರವಲ್ಲ, ಸ್ವರ್ಗದ ಬಗ್ಗೆ ಮತ್ತು ಅಲ್ಲಿ ಲಭ್ಯವಾಗಲಿರುವ ಅನುಗ್ರಹಗಳ ಬಗ್ಗೆ ಸಹಾಬಾ ಕಿರಾಮ್ ಪ್ರವಾದಿ(ﷺ)ರೊಂದಿಗೆ ಕೇಳಿದ್ದರು. ಆಗ ಪ್ರವಾದಿ(ﷺ)ರವರು ಅದನ್ನು ವಿರೋಧಿಸಲಿಲ್ಲ. ಬದಲಾಗಿ ಅವರಿಗೆ ಅರ್ಥವಾಗುವ ರೀತಿಯಲ್ಲಿ ಉತ್ತರ ಕೊಟ್ಟಿದ್ದರು.

ಉದಾಹರಣೆಗೆ ಸಹಾಬಾಗಳು ಕೇಳಿದರು:

يَا رَسُولَ اللَّهِ، الْجَنَّةُ مَا بِنَاؤُهَا؟

**"ಓ ಅಲ್ಲಾಹನ ರಸೂಲರೇ, ಸ್ವರ್ಗವನ್ನು ಯಾವುದರಿಂದ ನಿರ್ಮಿಸಲಾಗಿದೆ?"**

ಆಗ ಪ್ರವಾದಿ(ﷺ)ರವರು ಹೇಳಿದರು:

« لَبِنَةٌ مِنْ ذَهَبٍ وَلَبِنَةٌ مِنْ فِضَّةٍ »

**"ಚಿನ್ನದ ಇಟ್ಟಿಗೆ ಮತ್ತು ಬೆಳ್ಳಿಯ ಇಟ್ಟಿಗೆಗಳು."** [ಅದ್ದಾರಿಮೀ]

ಇನ್ನೊಮ್ಮೆ ಅವರು ಕೇಳಿದರು:

يَا رَسُولَ اللَّهِ، هَلْ نَصِلُ إِلَى نِسَائِنَا فِي الْجَنَّةِ؟

**"ಓ ಅಲ್ಲಾಹನ ರಸೂಲರೇ, ಸ್ವರ್ಗದಲ್ಲಿ ನಾವು ನಮ್ಮ ಪತ್ನಿಯರೊಂದಿಗೆ ಸೇರುವೆವೇ?"**

ಆಗ ಪ್ರವಾದಿ(ﷺ)ರವರು **ಹೌದೆಂದು** ಹೇಳಿದರು. [ಸಿಲ್ಸಿಲತು ಸ್ಸಹೀಹಃ]

• ಸ್ವರ್ಗದ ಬಗ್ಗೆ ಮತ್ತು ಅದರಲ್ಲಿರುವ ಅನುಗ್ರಹಗಳ ಬಗ್ಗೆ ಕೇಳುವಾಗ ಸ್ವಾಭಾವಿಕವಾಗಿಯೂ ಮನುಷ್ಯನ ಮನಸ್ಸು –ಅವನು ಪುರುಷನಾಗಿದ್ದರೂ, ಮಹಿಳೆಯಾಗಿದ್ದರೂ– ಅದನ್ನು ಆಸೆಪಡುತ್ತದೆ. ಆದರೆ ಇದು ಕೇವಲ ಒಂದು ಆಸೆಪಡುವ ವಸ್ತುವಾಗಿ ಬಾಕಿಯಾಗಬಾರದು. ಬದಲಾಗಿ ಆ ಅಸೆಯನ್ನು ಈಡೇರಿಸುವುದಕ್ಕಾಗಿ ನಾವು ಸತ್ಕರ್ಮಗಳನ್ನು ಮಾಡಬೇಕಾಗಿದೆ.

ಅಲ್ಲಾಹು ತಆಲಾ ಹೇಳುತ್ತಾನೆ:

﴿ وَتِلْكَ الْجَنَّةُ الَّتِي أُورِثْتُمُوهَا بِمَا كُنْتُمْ تَعْمَلُونَ ﴾

**"ನೀವು ಮಾಡಿರುವ ಕರ್ಮಗಳ ಕಾರಣದಿಂದಾಗಿ ನಿಮಗೆ ಆ ಸ್ವರ್ಗವನ್ನು ನೀಡಲಾಗಿದೆ." [ಕುರ್‌ಆನ್ 43:72]**

ಆದ್ದರಿಂದ ಸ್ವರ್ಗದ ಬಗ್ಗೆ ಆಸೆಪಡುವುದರ ಜೊತೆಗೆ ಅದನ್ನು ಕರ್ಮಗಳ ಮೂಲಕ ನಿಜಪಡಿಸಬೇಕಾಗಿದೆ.

• ಸ್ವರ್ಗದಲ್ಲಿರುವ ಅನುಗ್ರಹಗಳು ಪುರುಷರಿಗೆ ಮಾತ್ರ ಸೀಮಿತವಲ್ಲ. ಅದನ್ನು ಮುತ್ತಕೀಗಳಿಗಾಗಿ ಸಿದ್ಧಗೊಳಿಸಲಾಗಿದೆಯೆಂದು ಅಲ್ಲಾಹು ಹೇಳಿದ್ದಾನೆ. [ಕುರ್‌ಆನ್ 3:133]. ಮುತ್ತಕೀಗಳಲ್ಲಿ ಪುರುಷರು ಮತ್ತು ಮಹಿಳೆಯರು ಒಳಪಡುತ್ತಾರೆ.

ಅಲ್ಲಾಹು ತಆಲಾ ಹೇಳುತ್ತಾನೆ:

﴿ وَمَنْ يَعْمَلْ مِنَ الصَّالِحَاتِ مِنْ ذَكَرٍ أَوْ أُنْثَى وَهُوَ مُؤْمِنٌ فَأُولَئِكَ يَدْخُلُونَ الْجَنَّةَ وَلَا يُظْلَمُونَ نَقِيرًا ﴾

**“ಗಂಡಾಗಲಿ, ಹೆಣ್ಣಾಗಲಿ, ಯಾರು ವಿಶ್ವಾಸಿಯಾಗಿರುತ್ತಾ ಸತ್ಕರ್ಮಗಳನ್ನು ಮಾಡುತ್ತಾರೋ ಅವರು ಸ್ವರ್ಗವನ್ನು ಪ್ರವೇಶಿಸುವರು. ಅವರೊಂದಿಗೆ ಸ್ವಲ್ಪವೂ ಅನ್ಯಾಯವೆಸಗಲಾಗದು.” [ಕುರ್‌ಆನ್ 4:124]**

• ಸ್ವರ್ಗ ಪ್ರವೇಶದ ವಿವರಣಾತ್ಮಕ ಅಂಶಗಳನ್ನು ತಿಳಿದುಕೊಳ್ಳುವುದಕ್ಕಾಗಿ ಅಂದರೆ ಅಲ್ಲಿ ತನ್ನೊಂದಿಗೆ ಏನು ಮಾಡಲಾಗುವುದು? ಅಲ್ಲಿ ತಾನು ಎಲ್ಲಿಗೆ ಹೋಗುವೆನು? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳುತ್ತಾ ಬಹುಶಃ ತಾನು ಹೋಗುತ್ತಿರು ವುದು ವಿನಾಶಕಾರಿಯಾದ ಒಂದು ಪ್ರದೇಶಕ್ಕಾಗಿದೆ ಎಂಬಂತೆ ಭಾವಿಸಿಕೊಳ್ಳುವುದು ಮಹಿಳೆಯರಿಗೆ ಯೋಗ್ಯವಾದುದಲ್ಲ. ತಮಗೆ ಸ್ವರ್ಗಪ್ರವೇಶವು ಲಭ್ಯವಾದರೆ ಅಲ್ಲಿರುವ ಎಲ್ಲ ಅನುಗ್ರಹಗಳೂ ಲಭ್ಯವಾಗುವುದು ಎಂಬುದನ್ನು ತಿಳಿದುಕೊಂಡು ಅದಕ್ಕಾಗಿ ಅಮಲ್ ಮಾಡಬೇಕಾದುದು ಉತ್ತಮವಾಗಿದೆ.

ಅಲ್ಲಾಹು ಹೇಳುತ್ತಾನೆ:

﴿ وَفِيهَا مَا تَشْتَهِيهِ الْأَنْفُسُ وَتَلَذُّ الْأَعْيُنُ وَأَنْتُمْ فِيهَا خَالِدُونَ ﴾

**“ಮನಸ್ಸುಗಳು ಬಯಸುವುದೆಲ್ಲವೂ ಮತ್ತು ಕಣ್ಣುಗಳು ಆಸೆಪಡುವುದೆಲ್ಲವೂ ಅಲ್ಲಿದೆ. ನೀವು ಅಲ್ಲಿ ಶಾಶ್ವತವಾಗಿ ವಾಸಿಸುವಿರಿ.” [ಕುರ್‌ಆನ್ 43:71]**

ಮಾತ್ರವಲ್ಲ, ಸ್ವರ್ಗದ ಜನರ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿ رَضِيَ اللَّهُ عَنْهُمْ وَرَضُوا عَنْهُ ﴾

**“ಅವರ ಬಗ್ಗೆ ಅಲ್ಲಾಹು ಸಂತೃಪ್ತನಾಗಿರುವನು ಮತ್ತು ಅಲ್ಲಾಹನ ಬಗ್ಗೆ ಅವರೂ ಸಂತೃಪ್ತರಾಗಿರುವರು.” [ಕುರ್‌ಆನ್5:119]**

• ಸ್ವರ್ಗದಲ್ಲಿ ಆಸೆ ಹುಟ್ಟಿಸುವಂತಹ ರೀತಿಯಲ್ಲಿರುವ ವಿವಿಧ ತಿನಿಸುಗಳು, ಸುಂದರವಾದ ದೃಶ್ಯಗಳು, ವಸತಿಗಳು, ಉಡುಪುಗಳು ಇತ್ಯಾದಿಗಳ ಬಗ್ಗೆ ಕುರ್‌ಆನ್ ಮತ್ತು ಸುನ್ನತ್ತಿನಲ್ಲಿ ಏನೆಲ್ಲ ಬಂದಿವೆಯೋ ಅವೆಲ್ಲವೂ ಪುರುಷರಿಗೂ ಮಹಿಳೆಯ ರಿಗೂ ಲಭ್ಯವಿರುವುದು. ಪುರುಷರು ಮತ್ತು ಮಹಿಳೆಯರೆಲ್ಲರೂ ಇವುಗಳನ್ನು ಅನುಭವಿಸುವರು.

ಹಾಗಾದರೆ ಸ್ವರ್ಗದಲ್ಲಿ ಅಲ್‌ಹೂರುಲ್ ಈನ್ (ವಿಶಾಲ ಕಣ್ಣುಗಳುಳ್ಳ ಅಪ್ಸರೆಯರು) ಮತ್ತು ಸುರಸುಂದರಿಯರಾದ ತರುಣಿಯರು ಸಿಗುವರೆಂದು ಕೇವಲ ಪುರುಷರಿಗೆ

ಮಾತ್ರ ಹೇಳಲು ಕಾರಣವೇನು? ಇಂತಹದ್ದು ಮಹಿಳೆಯರಿಗೂ ಲಭ್ಯವಾಗುವುದೆಂದು ಏಕೆ ಹೇಳಲಾಗಿಲ್ಲ?

ಇದಕ್ಕಿರುವ ಉತ್ತರ:

1. ಅಲ್ಲಾಹು ಹೇಳುತ್ತಾನೆ:

﴿ لَا يُسْأَلُ عَمَّا يَفْعَلُ وَهُمْ يُسْأَلُونَ ﴾

**"ಅವನು (ಅಲ್ಲಾಹು) ಏನು ಮಾಡುತ್ತಾನೋ ಅದರ ಬಗ್ಗೆ ಪ್ರಶ್ನಿಸುವವರಾರೂ ಇಲ್ಲ. ಆದರೆ ಅವರು (ಮನುಷ್ಯರು) ಏನು ಮಾಡುತ್ತಾರೋ ಅದರ ಬಗ್ಗೆ ಪ್ರಶ್ನಿಸಲಾಗುವುದು." [ಕುರ್‌ಆನ್ 21:23]**

ಆದ್ದರಿಂದ ಇದರ ವಾಸ್ತವತೆಯ ಬಗ್ಗೆ ಕೇಳುವುದು ತಪ್ಪಾದರೂ ಇದರ ಹಿಂದಿರುವ ಹಿಕ್ಮತ್‌ನ ಬಗ್ಗೆ ಕೇಳುವುದು ತಪ್ಪಾಗಲಾರದು.

2. ನಾಚಿಕೆಯು ಮಹಿಳೆಯರ ನೈಸರ್ಗಿಕ ಗುಣಗಳಲ್ಲಿ ಸೇರಿದ್ದಾಗಿದೆಯೆಂಬುದು ಎಲ್ಲರೂ ತಿಳಿದಿರುವ ವಿಚಾರವಾಗಿದೆ. ಮಹಿಳೆಯರು ಯಾವುದರ ಬಗ್ಗೆ ನಾಚಿಕೆಪಡುತ್ತಾರೋ ಅದನ್ನು ಹೇಳಿ ಅವರಲ್ಲಿ ಸ್ವರ್ಗಕ್ಕಾಗಿ ಆಸೆ ಹುಟ್ಟಿಸುವುದನ್ನು ಅಲ್ಲಾಹು ಮಾಡಲಾರನು.

3. ಎಲ್ಲರೂ ತಿಳಿದಿರುವಂತೆ ಸ್ತ್ರೀಯರ ಬಗ್ಗೆಯಿರುವ ಪುರುಷರ ಆಸೆಯು ಪುರುಷರ ಬಗ್ಗೆಯಿರುವ ಸ್ತ್ರೀಯರ ಆಸೆಯಂತಲ್ಲ. ಆದ್ದರಿಂದ ಅಲ್ಲಾಹು ಸ್ವರ್ಗದ ಸ್ತ್ರೀಯರ ಬಗ್ಗೆ ಕೇವಲ ಪುರುಷರಿಗೆ ಮಾತ್ರ ಆಸೆ ಹುಟ್ಟಿಸಿದ್ದಾನೆ. ಪ್ರವಾದಿ(ﷺ)ರವರ ಈ ಕೆಳಗಿನ ವಚನವು ಕೂಡ ಇದಕ್ಕೆ ಆಧಾರವಾಗಿದೆ:

« مَا تَرَكْتُ بَعْدِي فِتْنَةً أَضَرَّ عَلَى الرِّجَالِ مِنَ النِّسَاءِ »

**"ಸ್ತ್ರೀಯರಿಗಿಂತಲೂ ಹೆಚ್ಚು ಹಾನಿಕರವಾದ ಒಂದು ಪರೀಕ್ಷೆಯನ್ನು ನಾನು ನನ್ನ ನಂತರ ಬಿಟ್ಟು ಹೋಗುತ್ತಿಲ್ಲ." [ಅಲ್‌ಬುಖಾರೀ ಮತ್ತು ಮುಸ್ಲಿಮ್]**

ಮಹಿಳೆಯರ ಬಗ್ಗೆಯಿರುವ ಪುರುಷರ ಆಸೆಯು ಅತ್ಯಂತ ತೀವ್ರವಾಗಿದೆ ಯೆಂದು ಈ ಹದೀಸಿನಿಂದ ಗ್ರಹಿಸಬಹುದಾಗಿದೆ.

ಮಹಿಳೆಯರ ಬಗ್ಗೆ ಹೇಳುವುದಾದರೆ ಉಡುಪು ಮತ್ತು ಆಭರಣಗಳನ್ನು ತೊಟ್ಟು ಅಲಂಕಾರಗೊಳ್ಳುವ ಬಗ್ಗೆ ಅವರಿಗಿರುವ ಆಸೆಯು ಪುರುಷರ ಬಗ್ಗೆಯಿರುವ ಆಸೆಗಿಂತಲೂ ಮಿಗಿಲಾಗಿದೆ.

4. ಅಶ್ಶೈಖ್ ಅಲ್‌ಉಸೈಮೀನ್ ಹೇಳುತ್ತಾರೆ:

لِأَنَّ الزَّوْجَ هُوَ الطَّالِبُ وَهُوَ الرَّاغِبُ فِي الْمَرْأَةِ، فَلِذَلِكَ ذُكِرَتِ الزَّوْجَاتُ للرِّجَالِ فِي الْجَنَّةِ وَسُكِتَ عَنِ الْأَزْوَاجِ لِلنِّسَاءِ، وَلَكِنْ لَيْسَ مُقْتَضَى ذَلِكَ أَنَّهُ لَيْسَ لَهُنَّ أَزْوَاجٌ... بَلْ لَهُنَّ أَزْوَاجٌ مِنْ بَنِي آدَمَ.

**"ಯಾಕೆಂದರೆ ಮಹಿಳೆಯನ್ನು ಹುಡುಕುವವನು ಮತ್ತು ಮಹಿಳೆಗಾಗಿ ಆಸೆಪಡುವವನು ಪುರುಷನಾಗಿದ್ದಾನೆ. ಆದ್ದರಿಂದ ಸ್ವರ್ಗದಲ್ಲಿ ಪುರುಷರಿಗೆ ಪತ್ನಿಯರಿ ರುವರೆಂದು ಹೇಳಲಾಗಿದೆ ಮತ್ತು ಮಹಿಳೆಯರಿಗೆ ಪತಿಯಂದಿರು ಇರುವರೆಂಬುದರ ಬಗ್ಗೆ ಮೌನ ವಹಿಸಲಾಗಿದೆ. ಇದರ ಅರ್ಥ ಸ್ತ್ರೀಯರಿಗೆ ಪತಿಯಂದಿರು ಇರಲಾರರು ಎಂದಲ್ಲ... ಬದಲಾಗಿ ಅವರಿಗೆ ಮನುಷ್ಯರಲ್ಲಿ ಸೇರಿದ ಪತಿಯಂದಿರು ಇರುವರು."**

6. ಇಹಲೋಕದಲ್ಲಿ ಮಹಿಳೆಯರ ಸ್ಥಿತಿಯು ಈ ಕೆಳಗಿನ ಆರು ವಿಷಯಗಳಿಂದ ಹೊರಗಿರಲಾರದು:

1. ಒಂದೋ ಆಕೆ ವಿವಾಹಕ್ಕೆ ಮೊದಲೇ ಮರಣ ಹೊಂದುವಳು.

2. ಅಥವಾ ತಲಾಕ್‌ನ ನಂತರ ಇನ್ನೊಬ್ಬನನ್ನು ವಿವಾಹವಾಗುವುದಕ್ಕೆ ಮೊದಲೇ ಮರಣಹೊಂದುವಳು.

3. ಅಥವಾ ಆಕೆ ವಿವಾಹಿತಳಾಗಿರುತ್ತಾಳೆ. ಆದರೆ ಆಕೆಯ ಪತಿ ಸ್ವರ್ಗವಾಸಿ ಯಲ್ಲ. (ಅಲ್ಲಾಹು ಕಾಪಾಡಲಿ).

4. ಅಥವಾ ಆಕೆ ವಿವಾಹವಾದ ಬಳಿಕ ಮರಣಹೊಂದುವಳು.

5. ಅಥವಾ ಆಕೆಯ ಪತಿ ಮೃತಪಡುತ್ತಾನೆ ಮತ್ತು ಆಕೆ ತನ್ನ ಮರಣದ ತನಕ ಬೇರೊಂದು ವಿವಾಹವಾಗುವುದಿಲ್ಲ.

6. ಅಥವಾ ಆಕೆಯ ಪತಿ ಮೃತಪಡುತ್ತಾನೆ ಮತ್ತು ಆಕೆ ಬೇರೊಬ್ಬನನ್ನು ವಿವಾಹವಾಗುತ್ತಾಳೆ.

ಒಬ್ಬ ಮಹಿಳೆ ಮರಣಹೊಂದುವ ಸಂದರ್ಭದಲ್ಲಿ ಮೇಲೆ ಸೂಚಿಸಿದ ಆರು ಸ್ಥಿತಿಗಳಲ್ಲಿ ಯಾವುದಾದರೊಂದು ಸ್ಥಿತಿಯಲ್ಲಿರುತ್ತಾಳೆ.

1. ಆಕೆ ವಿವಾಹಕ್ಕೆ ಮೊದಲೇ ಮರಣಹೊಂದುವಳು. ಇಂತಹ ಮಹಿಳೆಗೆ ಅಲ್ಲಾಹು ಸ್ವರ್ಗದಲ್ಲಿ ಸ್ವರ್ಗವಾಸಿಗಳಲ್ಲಿ ಸೇರಿದ ಒಬ್ಬ ವ್ಯಕ್ತಿಯನ್ನು ವಿವಾಹ ಮಾಡಿಕೊಡುವನು. ಯಾಕೆಂದರೆ ಪ್ರವಾದಿ(ﷺ)ರವರು ಹೇಳುತ್ತಾರೆ:

« مَا فِي الْجَنَّةِ أَعْزَبُ ».

“ಸ್ವರ್ಗದಲ್ಲಿ ಅವಿವಾಹಿತರು ಇರಲಾರರು.” [ಮುಸ್ಲಿಮ್]

ಅಶ್ಶೈಖ್ ಅಲ್‌ಉಸೈಮೀನ್ ಹೇಳುತ್ತಾರೆ:

إِذَا لَمْ تَتَزَوَّجْ فِي الدُّنْيَا فَإِنَّ اللَّهَ تَعَالَى يُزَوِّجُهَا مَا تُقِرُّ بِهَا عَيْنُهَا فِي الْجَنَّةِ... فَالنَّعِيمُ فِي الْجَنَّةِ لَيْسَ مَقْصُورًا عَلَى الذُّكُورِ وَإِنَّمَا هُوَ لِلذُّكُورِ وَالْإِنَاثِ. وَمِنْ جُمْلَةِ النَّعِيمِ الزَّوَاجُ.

**“ಆಕೆ ಇಹಲೋಕದಲ್ಲಿ ವಿವಾಹಿತಳಲ್ಲದಿದ್ದರೆ ಆಕೆಯ ಕಣ್ಣಿಗೆ ತಂಪು ನೀಡುವ (ಅಂದರೆ ಆಕೆ ತೃಪ್ತಿಪಡುವ) ವ್ಯಕ್ತಿಯನ್ನು ಅಲ್ಲಾಹು ಸ್ವರ್ಗದಲ್ಲಿ ಆಕೆಗೆ ವಿವಾಹ ಮಾಡಿಕೊಡುವನು.... ಸ್ವರ್ಗದ ಅನುಗ್ರಹಗಳು ಕೇವಲ ಪುರುಷರಿಗೆ ಮಾತ್ರ ಸೀಮಿತವಲ್ಲ. ಅವು ಪುರುಷರಿಗೂ ಸ್ತ್ರೀಯರಿಗೂ ಇರುವುದಾಗಿದೆ. ವಿವಾಹವು ಆ ಅನುಗ್ರಹಗಳಲ್ಲೊಂದಾಗಿದೆ.”**

2. ತಲಾಕ್‌ನ ನಂತರ ಇನ್ನೊಬ್ಬನನ್ನು ವಿವಾಹವಾಗುವುದಕ್ಕೆ ಮೊದಲೇ ಮರಣ ಹೊಂದುವಳು. ಈಕೆಯ ಸ್ಥಿತಿ ಮೇಲೆ ಹೇಳಿದವಳ ಸ್ಥಿತಿಯಂತೆಯೇ ಆಗಿದೆ.

3. ಆಕೆ ವಿವಾಹಿತಳಾಗಿರುತ್ತಾಳೆ. ಆದರೆ ಆಕೆಯ ಪತಿ ಸ್ವರ್ಗವಾಸಿಯಲ್ಲ. ಈಕೆಯ ಸ್ಥಿತಿಯೂ ಮೇಲೆ ಹೇಳಿದವಳ ಸ್ಥಿತಿಯಂತೆಯೇ ಆಗಿದೆ.

ಅಶ್ಶೈಖ್ ಅಲ್‌ಉಸೈಮೀನ್ ಹೇಳುತ್ತಾರೆ:

فَالْمَرْأَةُ إِذَا كَانَتْ مِنْ أَهْلِ الْجَنَّةِ وَلَمْ تَتَزَوَّجْ أَوْ كَانَ زَوْجُهَا لَيْسَ مِنْ أَهْلِ الْجَنَّةِ، فَإِنَّهَا إِذَا دَخَلَتِ الْجَنَّةَ فَهُنَاكَ مِنْ أَهْلِ الْجَنَّةِ مَنْ لَمْ يَتَزَوَّجُوا مِنَ الرِّجَالِ. أَيْ فَيَتَزَوَّجُهَا أَحَدُهُمْ.

**“ಮಹಿಳೆಯು ಸ್ವರ್ಗವಾಸಿಗಳಲ್ಲಿ ಸೇರಿದವಳಾಗಿದ್ದು ಆಕೆ ಅವಿವಾಹಿತೆಯಾಗಿದ್ದರೆ ಅಥವಾ ಆಕೆಯ ಪತಿ ಸ್ವರ್ಗವಾಸಿಗಳಲ್ಲಿ ಸೇರಿದವನಲ್ಲದಿದ್ದರೆ ಆಕೆ ಸ್ವರ್ಗವನ್ನು ಪ್ರವೇಶಿಸುವಾಗ ಸ್ವರ್ಗದ ಜನರಲ್ಲಿ ವಿವಾಹವಾಗದ ಪುರುಷರು ಕೂಡ ಇರುತ್ತಾರೆ. ಅಂದರೆ ಅವರಲ್ಲೊಬ್ಬರು ಈಕೆಯನ್ನು ವಿವಾಹವಾಗುವರು.”**

4. ಆಕೆ ವಿವಾಹವಾದ ಬಳಿಕ ಮರಣಹೊಂದುವಳು. ಇಂತಹ ಮಹಿಳೆಗೆ ಇಹಲೋಕದಲ್ಲಿದ್ದ ಆಕೆಯ ಪತಿಯೇ ಸ್ವರ್ಗದಲ್ಲೂ ಪತಿಯಾಗಿರುತ್ತಾನೆ.

5. ಆಕೆಯ ಪತಿ ಮೃತಪಡುತ್ತಾನೆ ಮತ್ತು ಆಕೆ ತನ್ನ ಮರಣದ ತನಕ ಬೇರೊಂದು ವಿವಾಹವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಮೃತಪಟ್ಟ ಆ ಪತಿಯೇ ಸ್ವರ್ಗದಲ್ಲೂ ಆಕೆಯ ಪತಿಯಾಗಿರುತ್ತಾನೆ.

6. ಆಕೆಯ ಪತಿ ಮೃತಪಡುತ್ತಾನೆ ಮತ್ತು ಆಕೆ ಬೇರೊಬ್ಬನನ್ನು ವಿವಾಹ ವಾಗುತ್ತಾಳೆ. ಇಂತಹ ಸಂದರ್ಭದಲ್ಲಿ ಆಕೆಯ ಕೊನೆಯ ಪತಿ ಯಾರೋ ಆತನೇ ಸ್ವರ್ಗದಲ್ಲೂ ಆಕೆಯ ಪತಿಯಾಗಿರುತ್ತಾನೆ. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

« الْمَرْأَةُ لِآخِرِ أَزْوَاجِهَا ».

**“ಸ್ತ್ರೀಯು ಆಕೆಯ ಪತಿಯಂದಿರಲ್ಲಿ ಕೊನೆಯವನಿಗೆ ಇರುವವಳಾಗಿದ್ದಾಳೆ.”** [ಸಿಲ್ಸಿಲತು ಸ್ಸಹೀಹ:]

ಹುದೈಫಃರವರು ತಮ್ಮ ಪತ್ನಿಯೊಂದಿಗೆ ಹೇಳುತ್ತಾರೆ:

إِنْ شِئْتِ أَنْ تَكُونِي زَوْجَتِي فِي الْجَنَّةِ فَلَا تَزَوَّجِي بَعْدِي، فَإِنَّ الْمَرْأَةَ فِي الْجَنَّةِ لِآخِرِ أَزْوَاجِهَا فِي الدُّنْيَا، فَلِذَلِكَ حَرَّمَ اللَّهُ عَلَى أَزْوَاجِ النَّبِيِّ أَنْ يَنْكِحْنَ بَعْدَهُ، لِأَنَّهُنَّ أَزْوَاجُهُ فِي الْجَنَّةِ.

**“ಸ್ವರ್ಗದಲ್ಲೂ ನೀನು ನನಗೆ ಪತ್ನಿಯಾಗಿರಬೇಕೆಂದು ನೀನು ಇಚ್ಛಿಸುವುದಾದರೆ ನನ್ನ ಮರಣಾನಂತರ ನೀನು ಬೇರೆ ವಿವಾಹವಾಗಬಾರದು. ಯಾಕೆಂದರೆ ಒಬ್ಬ ಮಹಿಳೆಗೆ ಇಹಲೋಕದಲ್ಲಿ ಆಕೆಯ ಪತಿಯಂದಿರಲ್ಲಿ ಕೊನೆಯವನು ಯಾರೋ ಆತನೇ ಸ್ವರ್ಗದಲ್ಲೂ ಆಕೆಯ ಪತಿಯಾಗಿರುತ್ತಾನೆ. ಈ ಕಾರಣದಿಂದಲೇ ಪ್ರವಾದಿ(ﷺ)ರವರ ಪತ್ನಿಯರು ಅವರ ಮರಣಾನಂತರ ಬೇರೆ ವಿವಾಹವಾಗುವುದನ್ನು ಅಲ್ಲಾಹು**

**ನಿಷಿದ್ಧಗೊಳಿಸಿದ್ದಾನೆ. ಯಾಕೆಂದರೆ ಸ್ವರ್ಗದಲ್ಲೂ ಅವರೇ ಪ್ರವಾದಿ(ﷺ)ರವರ ಪತ್ನಿಯರಾಗಿರುತ್ತಾರೆ.” [ಸಿಲ್ಸಿಲತು ಸ್ಸಹೀಹ:]**

- ಜನಾರ್ಝಃ ನಮಾರ್ಝ್‌ನಲ್ಲಿ ನಾವು ಹೀಗೆ ಪ್ರಾರ್ಥಿಸಬೇಕೆಂದು ಹೇಳಲಾಗಿದೆಯಲ್ಲವೇ?

« وَأَبْدِلْهَا زَوْجًا خَيْرًا مِنْ زَوْجِهَا »

**“ಆಕೆಗೆ ಆಕೆಯ ಪತಿಗಿಂತಲೂ ಉತ್ತಮನಾಗಿರುವ ಪತಿಯನ್ನು ಬದಲಾಯಿಸಿ ನೀಡು.” [ಮುಸ್ಲಿಮ್]**

ಒಂದು ವೇಳೆ ಒಬ್ಬ ಮಹಿಳೆಗೆ ಇಹಲೋಕದಲ್ಲಿರುವ ಆಕೆಯ ಪತಿಯೇ ಸ್ವರ್ಗದಲ್ಲೂ ಆಕೆಯ ಪತಿಯಾಗುವುದಾದರೆ ಈ ಪ್ರಾರ್ಥನೆಯನ್ನು ನಾವು ಪ್ರಾರ್ಥಿಸುವುದಾದರೂ ಹೇಗೆ? ಅದೇ ರೀತಿ ಆಕೆ ಅವಿವಾಹಿತೆಯಾಗಿದ್ದರೆ ಈ ಪ್ರಾರ್ಥನೆಯನ್ನು ನಾವು ಪ್ರಾರ್ಥಿಸುವುದರಲ್ಲಿ ಅರ್ಥವೇನಿದೆ?

ಅಶ್ಶೈಖ್ ಅಲ್‌ಉಸೈಮೀನ್‌ರವರು ಹೇಳುವಂತೆ ಇದರ ಉತ್ತರವು ಹೀಗಿದೆ:

ಆಕೆ ಅವಿವಾಹಿತೆಯಾಗಿದ್ದರೆ ಆಕೆಯ ಪತಿಗಿಂತಲೂ ಉತ್ತಮವಾದ ಪತಿಯನ್ನು ಬದಲಾಯಿಸಿ ನೀಡು ಎಂದು ಹೇಳುವುದರ ಉದ್ದೇಶವು ಆಕೆ ಇನ್ನೂ ಬದುಕಿದ್ದರೆ ಆಕೆಗೆ ಯಾವ ಪುರುಷನನ್ನು ತಕ್ದೀರ್ ಮಾಡಲಾಗಿದೆಯೋ ಅವನಿಗಿಂತಲೂ ಉತ್ತಮ ಪತಿಯನ್ನು ನೀಡು ಎಂದಾಗಿದೆ.

ಇನ್ನು ಆಕೆ ವಿವಾಹಿತೆಯಾಗಿದ್ದರೆ ಆಕೆಯ ಪತಿಗಿಂತಲೂ ಉತ್ತಮವಾದ ಪತಿಯನ್ನು ಬದಲಾಯಿಸಿ ನೀಡು ಎಂದು ಹೇಳುವುದರ ಉದ್ದೇಶವು ಆಕೆಯ ಪತಿಗೆ ಇಹಲೋಕದಲ್ಲಿದ್ದ ಗುಣಗಳಿಗಿಂತಲೂ ಇನ್ನೂ ಉತ್ತಮವಾದ ಗುಣಗಳನ್ನು ಬದಲಾಯಿಸಿ ನೀಡು ಎಂದಾಗಿದೆ. ಯಾಕೆಂದರೆ ಬದಲಾಯಿಸಿ ನೀಡುವುದು ಒಂದೋ ವಸ್ತುವಿನ ರೂಪದಲ್ಲಾಗಿರಬಹುದು. ಅಂದರೆ ಉದಾಹರಣೆಗೆ ಒಂಟೆಗೆ ಬದಲಿಯಾಗಿ ಕುರಿಯನ್ನು ಮಾರುವುದು. ಹಾಗೆಯೇ ಬದಲಾಯಿಸಿ ನೀಡುವುದು ಗುಣಗಳ ರೂಪದಲ್ಲೂ ಆಗಿರಬಹುದು. ಉದಾಹರಣೆಗೆ ಹೀಗೆ ಹೇಳಲಾಗುತ್ತದೆ:

بَدَّلَ اللَّهُ كُفْرَ هَذَا الرَّجُلِ بِإِيمَانٍ.

**“ಅಲ್ಲಾಹು ಈ ವ್ಯಕ್ತಿಯ ಕುಫ್ರನ್ನು ಈಮಾನ್ ಆಗಿ ಬದಲಾಯಿಸಿ ನೀಡಲಿ.”**

ಅದೇ ರೀತಿ ಅಲ್ಲಾಹು ಹೇಳುತ್ತಾನೆ:

﴿ يَوْمَ تُبَدَّلُ الْأَرْضُ غَيْرَ الْأَرْضِ وَالسَّمَاوَاتُ ﴾

**"ಈ ಭೂಮಿಯು ಇದಲ್ಲದ ಇನ್ನೊಂದು ಭೂಮಿಯಾಗಿ ಮತ್ತು ಆಕಾಶಗಳು ಕೂಡ ಬದಲಾಯಿಸಲಾಗುವ ದಿನದಂದು." [ಕುರ್‌ಆನ್ 14:48]**

ಅಂದರೆ ಈ ಭೂಮಿ ಹೋಗಿ ಬೇರೆಯೇ ಒಂದು ಭೂಮಿ ಉಂಟಾಗುವುದಲ್ಲ. ಬದಲಾಗಿ ಭೂಮಿಯ ಸ್ವರೂಪವನ್ನು ಬದಲಾಯಿಸಿ ವಿಶಾಲಗೊಳಿಸಲಾಗುವುದು ಎಂದರ್ಥ. ಹಾಗೆಯೇ ಆಕಾಶಗಳ ಸ್ವರೂಪವನ್ನು ಬದಲಾಯಿಸಿ ಅವುಗಳನ್ನು ಸೀಳಲಾಗುವುದು ಎಂದರ್ಥ.

- ಸಹೀಹಾದ ಹದೀಸೊಂದರಲ್ಲಿ ಪ್ರವಾದಿ(ﷺ)ರವರು ಹೀಗೆನ್ನುತ್ತಾರೆ:

« إِنِّي رَأَيْتُكُنَّ أَكْثَرَ أَهْلِ النَّارِ.. »

**"ನಾನು ನಿಮ್ಮನ್ನು (ಮಹಿಳೆಯರನ್ನು) ನರಕವಾಸಿಗಳಲ್ಲಿ ಬಹುಸಂಖ್ಯಾತರನ್ನಾಗಿ ಕಂಡಿದ್ದೇನೆ." [ಅಲ್‌ಬುಖಾರಿ ಮತ್ತು ಮುಸ್ಲಿಮ್]**

ಇನ್ನೊಂದು ವರದಿಯಲ್ಲಿ ಹೀಗಿದೆ:

« إِنَّ أَقَلَّ سَاكِنِي الْجَنَّةِ النِّسَاءُ ».

**"ಸ್ವರ್ಗವಾಸಿಗಳಲ್ಲಿ ಮಹಿಳೆಯರು ಅತಿಕಡಿಮೆ ಸಂಖ್ಯೆಯಲ್ಲಿರುವವರು." [ಅಲ್‌ಬುಖಾರಿ ಮತ್ತು ಮುಸ್ಲಿಮ್]**

ಇನ್ನೊಂದು ಸಹೀಹ್ ಹದೀಸಿನಲ್ಲಿರುವಂತೆ ಸ್ವರ್ಗದಲ್ಲಿ ಪ್ರತಿಯೊಬ್ಬ ಪುರುಷನಿಗೂ ಇಹಲೋಕದ ಇಬ್ಬರು ಮಹಿಳೆಯರು ಪತ್ನಿಯರಾಗಿರುವರು ಎಂದು ಹೇಳಲಾಗಿದೆ.

« وَلِكُلِّ وَاحِدٍ مِنْهُمْ زَوْجَتَانِ ».

**"ಅವರಲ್ಲಿ (ಸ್ವರ್ಗವಾಸಿಗಳಲ್ಲಿ) ಪ್ರತಿಯೊಬ್ಬರಿಗೂ ಇಬ್ಬರು ಪತ್ನಿಯರಿರುವರು." [ಅಲ್‌ಬುಖಾರೀ ಮತ್ತು ಮುಸ್ಲಿಮ್]**

ಮೊದಲನೆಯ ಹದೀಸಿನಲ್ಲಿ ಸ್ವರ್ಗದಲ್ಲಿ ಮಹಿಳೆಯರು ಕಡಿಮೆ ಸಂಖ್ಯೆಯಲ್ಲಿರುವರು ಎನ್ನಲಾಗಿದೆ. ಆದರೆ ಎರಡನೆ ಹದೀಸಿನ ಪ್ರಕಾರ ಸ್ವರ್ಗದಲ್ಲಿ ಮಹಿಳೆಯರ ಸಂಖ್ಯೆಯು ಪುರುಷರ ಎರಡು ಪಟ್ಟು ಇರುವುದು ಎಂದಾಗಿದೆ. ಇದು ವಿರೋಧಾಭಾಸವಲ್ಲವೇ?

ಈ ಎರಡು ಹದೀಸ್‌ಗಳ ಮಧ್ಯೆ ಹೊಂದಾಣಿಕೆ ಮಾಡುವ ವಿಷಯದಲ್ಲಿ, ಅಂದರೆ ಮಹಿಳೆಯರು ಹೆಚ್ಚಾಗಿರುವುದು ಸ್ವರ್ಗದಲ್ಲೋ ಅಥವಾ ನರಕದಲ್ಲೋ ಎಂಬ ವಿಷಯದಲ್ಲಿ ಉಲಮಾಗಳಲ್ಲಿ ಭಿನ್ನಾಭಿಪ್ರಾಯವಿದೆ.

ಉಲಮಾಗಳಲ್ಲಿ ಕೆಲವರು ಹೇಳುತ್ತಾರೆ: ಇಹಲೋಕದಲ್ಲಿ ಮಹಿಳೆಯರ ಸಂಖ್ಯೆಯು ಅಧಿಕವಾಗಿದೆ. ಆದೇ ರೀತಿ ನರಕದಲ್ಲೂ ಅವರ ಸಂಖ್ಯೆ ಅಧಿಕವಾಗಿದೆ.

ಅಲ್‌ಕಾದೀ ಇಯಾದ್ ಹೇಳುತ್ತಾರೆ:

**"ಮನುಷ್ಯ ಸಂತತಿಗಳಲ್ಲಿ ಮಹಿಳೆಯರೇ ಅಧಿಕವಾಗಿದ್ದಾರೆ."**

ಅಂದರೆ ಇಹಲೋಕದಲ್ಲಿ ಮಹಿಳೆಯರು ಎಷ್ಟರ ಮಟ್ಟಿಗೆ ಪುರುಷರಿಗಿಂತ ಅಧಿಕವಾಗಿದ್ದಾರೆಂದರೆ ಸ್ವರ್ಗದಲ್ಲಿ ಪುರುಷರ ಎರಡು ಪಟ್ಟು ಇದ್ದೂ ಸಹ ನರಕದಲ್ಲೂ ಅವರೇ ಹೆಚ್ಚಾಗಿರುತ್ತಾರೆ.

ಇತರ ಕೆಲವು ಉಲಮಾಗಳು ಹೇಳುತ್ತಾರೆ: ಈ ಮೇಲಿನ ಹದೀಸ್‌ಗಳಲ್ಲಿರುವಂತೆ ನರಕವಾಸಿಗಳಲ್ಲಿ ಹೆಚ್ಚಿನವರೂ ಮಹಿಳೆಯರಾಗಿದ್ದಾರೆ. ಸ್ವರ್ಗದಲ್ಲಿರುವ ಅಪ್ಸರೆಗಳನ್ನು ಸೇರಿಸಿದರೆ ಸ್ವರ್ಗದಲ್ಲೂ ಅವರ ಸಂಖ್ಯೆಯು ಹೆಚ್ಚಾಗುತ್ತದೆ.

ಇತರ ಕೆಲವು ಉಲಮಾಗಳು ಹೇಳುತ್ತಾರೆ: ಆರಂಭಿಕ ಸ್ಥಿತಿಯಲ್ಲಿ ನರಕವಾಸಿಗಳಲ್ಲಿ ಹೆಚ್ಚಿನವರೂ ಮಹಿಳೆಯರಾಗಿರುತ್ತಾರೆ. ಆದರೆ ತರುವಾಯ ಅವರ ಪೈಕಿ ಮುಸ್ಲಿಮ್ ಸ್ತ್ರೀಯರು ಶಿಕ್ಷೆ ಮುಗಿದು ಸ್ವರ್ಗಕ್ಕೆ ಬರುವಾಗ ಸ್ವರ್ಗದಲ್ಲಿ ಅವರ ಸಂಖ್ಯೆಯು ಹೆಚ್ಚಾಗುತ್ತದೆ.

ಅಲ್‌ಕುರ್ತುಬೀ ಹೇಳುತ್ತಾರೆ:

يَحْتَمِلُ أَنْ يَكُونَ هَذَا فِي وَقْتِ كَوْنِ النِّسَاءِ فِي النَّارِ، وَأَمَّا بَعْدَ خُرُوجِهِنَّ فِي الشَّفَاعَةِ وَرَحْمَةِ اللَّهِ تَعَالَى حَتَّى لَا يَبْقَى فِيهَا أَحَدٌ مِمَّنْ قَالَ لَا إِلَهَ إِلَّا اللَّهُ، فَالنِّسَاءُ فِي الْجَنَّةِ أَكْثَرُ.

**"ಬಹುಶಃ ಇದು ಮಹಿಳೆಯರು ನರಕದಲ್ಲಿರುವ ಸಂದರ್ಭದ ಬಗ್ಗೆಯಾಗಿರ ಬಹುದು. ಆದರೆ ಶಫಾಅತ್‌ನಿಂದಾಗಿ ಮತ್ತು ಅಲ್ಲಾಹನ ರಹ್ಮತ್‌ನಿಂದಾಗಿ ಲಾಇಲಾಹ ಇಲ್ಲಲ್ಲಾಹ್ ಉಚ್ಚರಿಸಿದ ಯಾರೊಬ್ಬರೂ ನರಕದಲ್ಲಿ ಬಾಕಿಯಾಗದೆ ಹೊರಬರುವ ಸಂದರ್ಭದ ಬಗ್ಗೆ ಹೇಳುವುದಾದರೆ ಆಗ ಸ್ವರ್ಗದಲ್ಲಿ ಮಹಿಳೆಯರ ಸಂಖ್ಯೆಯು ಅಧಿಕವಾಗಿರುವುದು."**

ಒಟ್ಟಿನಲ್ಲಿ, ಮಹಿಳೆಯು ತಾನು ನರಕ ವಾಸಿಗಳಲ್ಲಿ ಸೇರಿದವಳಾಗದಂತೆ ಎಚ್ಚರ ವಹಿಸುವುದು ಅತ್ಯಾವಶ್ಯಕವಾಗಿದೆ.

• ಮಹಿಳೆಯು ಸ್ವರ್ಗವನ್ನು ಪ್ರವೇಶಿಸಿದರೆ ಅಲ್ಲಾಹು ಆಕೆಗೆ ಆಕೆಯ ಯೌವನ ಮತ್ತು ಕನ್ಯತ್ವವನ್ನು ಮರಳಿ ಕೊಡುವನು. ಯಾಕೆಂದರೆ ಪ್ರವಾದಿ(ﷺ)ರವರು ಹೇಳಿದರು:

« إِنَّ الْجَنَّةَ لَا يَدْخُلُهَا عَجُوزٌ... إِنَّ اللَّهَ تَعَالَى إِذَا أَدْخَلَهُنَّ الْجَنَّةَ حَوَّلَهُنَّ أَبْكَارًا ».

**"ಖಂಡಿತವಾಗಿಯೂ ವೃದ್ಧರು ಸ್ವರ್ಗವನ್ನು ಪ್ರವೇಶಿಸಲಾರರು... ಅಲ್ಲಾಹು ಮಹಿಳೆಯರನ್ನು ಸ್ವರ್ಗಕ್ಕೆ ಪ್ರವೇಶ ಮಾಡಿಸಿದರೆ ಅವರನ್ನು ಕನ್ಯೆಯರನ್ನಾಗಿ ಮಾರ್ಪಡಿಸುವನು." [ಅಬೂ ನುಐಮ್]**

• ಕೆಲವು ಅಸರ್‌ಗಳಲ್ಲಿ ವರದಿಯಾಗಿರುವಂತೆ ಸ್ವರ್ಗಪ್ರವೇಶ ಪಡೆದ ಮಹಿಳೆಯರು ಅವರ ಇಬಾದತ್‌ಗಳಿಗೆ ಅನುಗುಣವಾಗಿ ಅಪ್ಸರೆಯರಿಗಿಂತಲೂ ಅನೇಕ ಪಟ್ಟು ಸುಂದರಿಯರಾಗಿರುವರು.

• ಇಬ್ನುಲ್ ಕಯ್ಯಿಮ್‌ರವರು ಹೇಳುತ್ತಾರೆ: ಸ್ವರ್ಗದಲ್ಲಿ ಒಬ್ಬರು ಇನ್ನೊಬ್ಬರ ಪತ್ನಿಯರನ್ನು ಸಮೀಪಿಸುವುದನ್ನು ಸಂಪೂರ್ಣ ತಡೆಹಿಡಿಯಲಾಗಿದೆ.

• ಕೊನೆಯದಾಗಿ, ಮಹಿಳೆಯರಿಗೆ ನೀಡುವ ನಸೀಹತ್ ಏನೆಂದರೆ, ಸ್ವರ್ಗವು ಪುರುಷರಿಗೆ ಅಲಂಕಾರಗೊಂಡು ಸಿದ್ಧವಾಗಿರುವಂತೆಯೇ ನಿಮಗೂ ಅಲಂಕಾರ ಗೊಂಡು ಸಿದ್ಧವಾಗಿ ನಿಂತಿದೆ. ಆಯುಷ್ಯವು ಬಹಳ ಕಡಿಮೆಯಾಗಿದೆ. ಇಹಲೋಕ ಜೀವನದ ಬಳಿಕವಿರುವ ಪರಲೋಕ ಜೀವನವು ಶಾಶ್ವತವಾಗಿದೆ. ಆದ್ದರಿಂದ ನೀವು ಸ್ವರ್ಗದ ಶಾಶ್ವತವಾಸಿಗಳಾಗಲು ಪ್ರಯತ್ನಿಸಬೇಕಾಗಿದೆ.

ಸ್ವರ್ಗವನ್ನು ಪಡೆಯುವುದಕ್ಕಾಗಿ ನೀವು ನೀಡಬೇಕಾದ ದಕ್ಷಿಣೆಯು ಈಮಾನ್ ಮತ್ತು ಸತ್ಕರ್ಮಗಳಾಗಿವೆಯೇ ಹೊರತು ಮಿಥ್ಯ ಆಕಾಂಕ್ಷೆಗಳಲ್ಲ. ಪ್ರವಾದಿ(ﷺ)ರವರು ಹೇಳಿದ ಮಾತನ್ನು ಜ್ಞಾಪಿಸಿರಿ:

« إِذَا صَلَّتِ الْمَرْأَةُ خَمْسَهَا، وَصَامَتْ شَهْرَهَا، وَحَصَنَتْ فَرْجَهَا، وَأَطَاعَتْ زَوْجَهَا، قِيلَ لَهَا: ادْخُلِي الْجَنَّةَ مِنْ أَيِّ أَبْوَابِ شِئْتِ ».

**"ಒಬ್ಬಳು ಮಹಿಳೆ ಐದು ವೇಳೆಯ ನಮಾಝ್ ನಿರ್ವಹಿಸಿದರೆ, ರಮದಾನ್ ತಿಂಗಳ ಉಪವಾಸ ಆಚರಿಸಿದರೆ, ತನ್ನ ಗುಹ್ಯಾಂಗವನ್ನು ಸಂರಕ್ಷಿಸಿದರೆ ಮತ್ತು ತನ್ನ ಪತಿಯ ಆಜ್ಞಾಪಾಲನೆ ಮಾಡಿದರೆ ಆಕೆಯೊಂದಿಗೆ ಹೇಳಲಾಗುವುದು: ನೀನು ಇಚ್ಛಿಸುವ ಬಾಗಿಲಿನಿಂದ ಸ್ವರ್ಗವನ್ನು ಪ್ರವೇಶಿಸು." [ಅಹ್ಮದ್ ಮತ್ತು ಇಬ್ನ್ ಹಿಬ್ಬಾನ್]**

ಫಿತ್ನದೆಡೆಗೆ ಮತ್ತು ನಿಮ್ಮ ನಾಶದೆಡೆಗೆ ಆಹ್ವಾನಿಸುವವರ ಬಗ್ಗೆ ಸಂಪೂರ್ಣ ಎಚ್ಚರವಾಗಿರಿ. ಅವರು ಬಯಸುವುದು ನಿಮ್ಮ ನಾಶವನ್ನಾಗಿದೆ. ಸ್ವರ್ಗದಿಂದ ನಿಮ್ಮನ್ನು ತಿರುಗಿಸಿ ಬಿಡುವುದನ್ನಾಗಿದೆ. ಈ ವಿಮೋಚಕರ ಮತ್ತು ವಿಮೋಚಕಿಯರ ಬಣ್ಣದ ಮಾತುಗಳಿಗೆ ಮರುಳಾಗದಿರಿ. ಅವರು ನಿಮ್ಮನ್ನು ವಿಮೋಚನೆಗೊಳಿಸಬಯಸುವುದು ಸ್ವರ್ಗದಿಂದಾಗಿದೆ. ಅದೇ ರೀತಿ ಚಾನಲ್‌ಗಳಲ್ಲಿ ಪ್ರತ್ಯಕ್ಷರಾಗುವವರ ಬಗ್ಗೆಯೂ ಎಚ್ಚರವಾಗಿರಿ. ಅವರು ನಿಮ್ಮಿಂದ ಬಯಸುವುದು ನೀವೂ ಅವರಂತೆಯೇ ಆಗಬೇಕು ಎಂಬುದನ್ನಾಗಿದೆ.

ಮುಸ್ಲಿಮ್ ಸ್ತ್ರೀಯರು ಅನುಗ್ರಹಪೂರ್ಣವಾದ ಸ್ವರ್ಗಲೋಕವನ್ನು ಪ್ರವೇಶಿಸುವಂತೆ ಅಲ್ಲಾಹು ಮಾಡಲಿ. ಅಲ್ಲಾಹು ಅವರನ್ನು ಮಾರ್ಗದರ್ಶನ ನೀಡುವವರನ್ನಾಗಿಯೂ ಮಾರ್ಗದರ್ಶನ ಪಡೆದವರನ್ನಾಗಿಯೂ ಮಾಡಲಿ. ಸ್ತ್ರೀ ವಿಮೋಚನೆ (ಸ್ತ್ರೀ ನಾಶ)ಯೆಡೆಗೆ ಕರೆ ನೀಡುವ ಮನುಷ್ಯ ಶೈತಾನರ ಕೆಡುಕಿನಿಂದ ಅಲ್ಲಾಹು ಅವರನ್ನು ಕಾಪಾಡಲಿ. ಆಮೀನ್.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********